ಖುದ್ದಾಗಿ ಬಂದು, "ನೀವು ಎಂದು ಅವನ್ನು ಮಾರಾಟ ಮಾಡುತ್ತೀರೋ ಅಂದು ನಮಗೆ ದುಡ್ಡು ಕೊಡಿ, ಅಲ್ಲಿಯವರೆಗಾದರೂ ಅಷ್ಟಾದರೂ ದುಡ್ಡು ಬರುತ್ತದೆಂಬ ಗ್ಯಾರಂಟಿ ಇರುತ್ತದೆ. ನಮ್ಮ ಮನೆಯಲ್ಲಿಯೇ ಅವೆಲ್ಲವೂ ಉಳಿದರೆ ಗ್ಯಾರಂಟಿ ಇಲ್ಲ ಅವೆಲ್ಲವನ್ನೂ ನಮ್ಮ ದನಗಳೇ ತಿನ್ನುವ ಪರಿಸ್ಥಿತಿ ಬರುತ್ತದೆ ಎಂದು ಹೇಳಿದರು. ಆ ರೀತಿ ಒಪ್ಪಿಕೊಳ್ಳುವುದಾದರೆ ನಮ್ಮ ಹತ್ತಿರ ಅವನ್ನು ಇಟ್ಟುಕೊಳ್ಳುತ್ತೇವೆ ಎಂದು ನಾನು ಹೇಳಿದ್ದುಂಟು. ಏತನ್ಮಧ್ಯೆ ಪುನಃ ಅವರು ಬಹಳ ಪ್ರಬಲವಾಗಿ ಆಗಿಂದಾಗ್ಗೆ ಇಲ್ಲಿಗೆ ಬಂದು ನಮಗೆ ಬಹಳ ಕಷ್ಟವಾಗಿದೆ, ದುಡ್ಡು ಕೊಡಿ ಎಂದು ಒತ್ತಾಯ ಮಾಡುತ್ತಲೇ ಬರುತ್ತಿದ್ದಾರೆ. ಈಗ ಇಲ್ಲಿ ವ್ಯವಸಾಯ ಮಂತ್ರಿಗಳು ಇಲ್ಲ. ಅವರಿದ್ದಿದ್ದರೆ ಈ ಸಾರಿ ಅದನ್ನು ಮಾರಾಟ ಮಾಡಿದ್ದಾರೋ ಇಲ್ಲವೋ ಎಂಬುದನ್ನು ಅವರಲ್ಲಿ ಕೇಳಬಹುದಾಗಿತ್ತು. ಅದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಅವರ ವಿಚಾರವನ್ನು ಇವತ್ತು ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಸರ್ಕಾರ ಖಂಡಿತವಾಗಿ ಸಹಾನುಭೂತಿಯಿಂದ ನೋಡುತ್ತದೆ. ಆದಷ್ಟು ಜಾಗ್ರತೆ ಅವರಿಗೆ ಯಾವ ರೀತಿಯಾಗಿ ಪೇಮೆಂಟ್ ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡಲು ಪ್ರಯತ್ನ ಮಾಡುತ್ತೇನೆ. ಅದಕ್ಕಿಂತ ಹೆಚ್ಚಿಗೆ ಹೇಳಲು ನನಗೆ ಬಹಳ ಕಷ್ಟವಾಗುತ್ತದೆ, ಕ್ಷಮಿಸಿ.

KARNATAKA SALES TAX (AMENDMENT) BILL, 1977

Motion to Consider

SRI M. Y. GHORPADE (Minster for Finance).—I move :

"That the Karnataka Sales Tax (Amendment) Bill, 1977 be taken into consideration."

MADAM SPEAKER.—Motion moved–

"That the Karnataka Sales Tax (Amendment) Bill, 1977 be taken into consideration."

† ಶ್ರೀ ಎಂ ವೈ ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ನಾನು ಬಡ್ಜೆಟ್ ಮಂಡಿಸಿದಾಗ ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಸರ್ಕಾರದ ಉದ್ದೇಶವೇನೆಂಬುದನ್ನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಈಗ ಅಡಿಷನಲ್ ಸೇಲ್ಸ್‌ಟ್ಯಾಕ್ಸ್ ಪದ್ಧತಿಗೆ ನಮ್ಮ ರಾಜ್ಯದಲ್ಲಿ ಏನಿದೆ... .....

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಬಿಲ್ಲನ್ನು ಮಂಡನೆ ಮಾಡಿದರೋ ಅಥವಾ ಬೇಡಿಕೆಯನ್ನು ಮಂಡನೆ ಮಾಡಿದರೋ ?

ಅಧ್ಯಕ್ಷರು.—ಪ್ರಸೂದೆಯ ಮೇಲೆ ಮಾತನಾಡುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ — ಪದ್ಧತಿಗೆ ನಮ್ಮ ರಾಜ್ಯದಲ್ಲಿ ೧೦ ಲಕ್ಷಕ್ಕೂ ಜಾಸ್ತಿ ಟರ್ನೋವರ್ ಇರತಕ್ಕ ಆಸೆಸ್‌ಗಳ ಮೇಲೆ ನಾವು ಈ ಟ್ಯಾಕ್ಸನ್ನು ಹಾಕಿದ್ದೇವೆ. ಈಗ ೫ ಲಕ್ಷದಿಂದ ೧೦ ಲಕ್ಷದವರೆಗೆ ಟರ್ನೋವರ್ ಇರತಕ್ಕವರಿಗೆ ಅಡಿಷನಲ್ ಟ್ಯಾಕ್ಸ್ ವಿಧಿಸಬೇಕಂ. ಹಾಗೆ ಮಾಡುವಾಗ ಅಂತಹವರಿಗೆ ೧೫ ಪರ್ಸೆಂಟ್ ಟ್ಯಾಕ್ಸ್ ಹಾಕಬಹುದಕ್ಕೆ ಬದಲು ಈಗ ೭½ ಪರ್ಸೆಂಟ್ ಟ್ಯಾಕ್ಸ್ ಹಾಕಬೇಕಾಗಿ ಬರುತ್ತದೆ. ಇದನ್ನು ನಾನು ಹಿಂದೆ ಬಡ್ಜೆಟ್ ಭಾಷಣದಲ್ಲಿಯೇ ಹೇಳಿದ್ದೇನೆ. ಅದಕ್ಕನುಗುಣವಾಗಿಯೇ ಈ ಬಿಲ್ಲನ್ನು ಈ ಸಭೆಯಲ್ಲಿ ತಂದಿದ್ದೇನೆ. ಇದರ ಬಗ್ಗೆ ಒಂದೆರಡು ಮಂತ್ಯಾವಾದಂಹ ಅಂಕಿ ಅಂಶಗಳನ್ನು ಕೊಡುವುದಾದರೆ ನಮ್ಮ ರಾಜ್ಯದಲ್ಲಿ ಇರತ್ತಾ ೫ ಲಕ್ಷಕ್ಕೂ ಕಡಿಮೆ ಟರ್ನೋವರ್ ಇರತಕ್ಕಂಥ ಡೀಲರ್ಸ್ ೧,೦೫,೦೦೦ ಜನರಿದ್ದಾರೆ. ೫ ಲಕ್ಷದಿಂದ ೧೦ ಲಕ್ಷ ಟರ್ನೋವರ್ ಇರತಕ್ಕವರು ೫,೭೧೪ ಜನರಿದ್ದಾರೆ. ೧೦ ಲಕ್ಷಕ್ಕೆ ಮೇಲ್ಪಟ್ಟು ಒಂದು ಕೋಟಿಗೆ ಕಡಿಮೆ ಇರುವ ಟರ್ನೋವರ್ ಡೀಲರ್ಸ್ ೨,೨೨೩ ಜನರಿದ್ದಾರೆ. ಒಂದು ಕೋಟಿಗೂ ಮೇಲ್ಪಟ್ಟು ಇರುವವರು ೫೧೫ ಜನರಿದ್ದಾರೆ. ಇದರಲ್ಲಿ ೫ ಲಕ್ಷಕ್ಕೂ ಕಡಿಮೆ ಟರ್ನೋವರ್ ಇರತಕ್ಕಂಥ ೧,೦೫,೯೦೦ ಜನ ಏನಿದ್ದಾರೋ ಅವರು ಸರ್ಕಾರಕ್ಕೆ ಹೆಚ್ಚು ಕಡಿಮೆ ೧೩ ಕೋಟಿ ರೂಪಾಯಿಗಳಷ್ಟು ಸೇಲ್ಸ್‌ಟ್ಯಾಕ್ಸನ್ನು ಕೊಡುತ್ತಿದ್ದಾರೆ. ೫ ಲಕ್ಷದಿಂದ ೧೦ ಲಕ್ಷ ಟರ್ನೋವರ್ ಇರತಕ್ಕ ೫,೭೧೪

ಜನ ಏನಿದ್ದಾರೋ ಅವರು ೬ ಕೋಟಿ ೧೬ ಲಕ್ಷ ರೂಪಾಯಿಗಳಷ್ಟು ಸೇಲ್ಸ್ ಟ್ಯಾಕ್ಸನ್ನು ಕೊಡುತ್ತಿದ್ದಾರೆ. ೧೦ ಲಕ್ಷದಿಂದ ಒಂದು ಕೋಟಿ ಟರ್ನೋವರ್ ಇರತಕ್ಕ ೬,೨೨೩ ಜನರು ಏನಿದ್ದಾರೋ ಅವರು ೧೯ ಕೋಟಿ ೧೯ ಲಕ್ಷ ರೂಪಾಯಿಗಳಷ್ಟು ಸೇಲ್ಸ್ ಟ್ಯಾಕ್ಸನ್ನು ಕೊಡುತ್ತಿದ್ದಾರೆ. ಒಂದು ಕೋಟಿಗಿಂತ ಜಾಸ್ತಿ ಟರ್ನೋವರ್ ಇರತಕ್ಕ ೫೧೫ ಜನ ಏನಿದ್ದಾರೋ ಅವರು ೪೯ ಕೋಟಿ ೫೬ ಲಕ್ಷ ರೂಪಾಯಿಗಳಷ್ಟು ಸೇಲ್ಸ್ ಟ್ಯಾಕ್ಸನ್ನು ಕೊಡುತ್ತಿದ್ದಾರೆ. ನಾನು ಇವತ್ತು ಈ ಸಭೆಯಲ್ಲಿ ತಂದಿರುವ ಬಿಲ್ ಏನಿದೆಯೋ ಅದು ೫ ಲಕ್ಷದಿಂದ ೧೦ ಲಕ್ಷದವರೆಗೆ ಟರ್ನೋವರ್ ಇರತಕ್ಕ ೫,೭೧೪ ಜನ ಡೀಲರ್ಸ್‌ಗೆ ಮಾತ್ರ ಸಂಬಂಧ ಪಟ್ಟದ್ದು. ನಾನು ಮೊದಲೇ ಹೇಳಿದ ಪ್ರಕಾರ ಇವರು ೬ ಕೋಟಿ ೧೪ ಲಕ್ಷ ರೂಪಾಯಿಗಳಷ್ಟು ಸೇಲ್ಸ್ ಟ್ಯಾಕ್ಸನ್ನು ಕೊಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅಂತಹವರಿಗೆ ಕೆಲವು ರಿಯಾಯಿತಿ ಗಳನ್ನು ಕೊಡಲು ಈಗ ಆಹಾರಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಡಿಕ್ಲೇರ್ಡ್ ಗೂಡ್ಸ್‌ಆರ್ಟಿಕಲ್ಸ್ ಮೇಲೆ ಹಿಂದೆ ಏನು ಟ್ಯಾಕ್ಸ್ ಹಾಕಿತ್ತೋ ಅದನು ಕಡಿಮೆ ಮಾಡಿ ಈಗ ಕೇವಲ ೪ ಪರ್ಸೆಂಟ್ ಮಾತ್ರ ಹಾಕಿದೆ. ಇದಕ್ಕಿಂತ ಜಾಸ್ತಿ ಅವರಿಗೆ ಟ್ಯಾಕ್ಸ್ ಹಾಕುವುದಿಲ್ಲ ಎಂಬುದು ಈಗಾಗಲೇ ಪ್ರತಿಯೊಬ್ಬರಿಗೂ ಗೊತ್ತಿದೆ. ಇದು ಬಹಳ ಸರಳವಾದ ತೆರಿಗೆ. ಇದು ಟರ್ನ್‌ಓವರ್ ಮೇಲೆ ಹಾಕಿರುವುದು. ಐದು ಲಕ್ಷದಿಂದ ಹತ್ತು ಲಕ್ಷದವರೆಗೆ ಯಾರು ಯಾರು ಟರ್ನ್‌ಓವರ್ ಮಾಡುತ್ತಾರೆ. ಅವರಿಗೆ ಮಾತ್ರ ಇದು ಅನ್ವಯಿಸುತ್ತದೆ. ಈ ತೆರಿಗೆಯಿಂದಾಗಿ, ೧೯೭೬–೭೮ ನೇ ಸಾಲಿಗೆ ರಾಜ್ಯ ಸರ್ಕಾರಕ್ಕೆ ಹೊಸದಾಗಿ ಸುಮಾರು ಏಳತ್ತು ಲಕ್ಷ ರೂಪಾಯಿಗಳ ವರಮಾನ ಬರಬಹುದು. ಆದುದರಿಂದ, ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡ ಬೇಕೆಂದು ಪ್ರಾರ್ಥನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಮಂಡಿಸಿರುವ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ, ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಸರ್ಕಾರದವರು ಹಾಕಿರುವ ಈ ತೆರಿಗೆಯು ಹೊರೆಯು ಅನೀತಿಯುತವಾದುದೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಒಂದೊಂದೇ ತೆರಿಗೆಯನ್ನು ಹೀಗೆ ಏರಿಸುತ್ತಾ ಹೋದರೆ, ಅದು ಸಾರ್ವಜನಿಕರ ಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಎನ್ನುವುದನ್ನು ಮಾನ್ಯ ಅರ್ಥ ಸಚಿವರು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆ ಪ್ರಕಾರ ೧೯೭೧–೭೨ ರಲ್ಲಿ ಈ ತೆರಿಗೆ ಹಣ ೫೭ ಕೋಟಿ ಇದ್ದುದ್ದು ಕಳೆದ ಐದು ವರ್ಷಗಳಿಂದೀಚೆಗೆ ಅದು ೧೫೦ ಕೋಟಿ ರೂಪಾಯಿಗಳಿಗೆ ಏರಿಸಿದ್ದಾರೆ. ಇದರಿಂದ, ಪ್ರತಿ ತಲೆಗೆ ಪರ್ ಕ್ಯಾಪಿಟಾ ೫೦ ರೂಪಾಯಿ ಬಿದ್ದ ಹಾಗಾಯಿತು. ಸಂಪಾದನೆ ಮಾಡಿ ಲಾಭಗಳಿಸಿದ ಹಣದ ಮೇಲೆ ತೆರಿಗೆ ಹಾಕುವುದು ನ್ಯಾಯವಾದುದು. ಸರ್ಕಾರದವರು ಯಾವ ರೀತಿಯಿಂದಲಾದರೂ ವರ್ತಕರು ತೆರಿಗೆ ಕೊಡುವಂತೆ ಮಾಡಬೇಕೆಂದು ಪ್ರಯತ್ನ ಮಾಡಿದರೆ, ವರ್ತಕರೂ ಯಾವ ರೀತಿ ಇದರಿಂದ ತಪ್ಪಿಸಿಕೊಳ್ಳಬಹುದೆಂದು ಯೋಚನೆ ಮಾಡುತ್ತಾರೆ. ವರ್ತಕರು ಎಳೂವರೆ ಪರ್ಸೆಂಟ್ ತೆರಿಗೆ ಕೊಡಬೇಕಾದಾಗ, ಅವರು ೧೫-೨೦ ಪರ್ಸೆಂಟ್ ಬೆಲೆಯನ್ನು ಏರಿಸಿ, ತಮ್ಮ ಲಾಭವನ್ನು ಸರಿಯಾಗಿ ಇಟ್ಟುಕೊಂಡು ಬಳಕೆದಾರನ ತಲೆಯ ಮೇಲೆ ಈ ತೆರಿಗೆಯ ಭಾರವನ್ನು ಕೊನೆಗೆ ಹೊರಿಸುತ್ತಾರೆ. ಆದುದರಿಂದ, ಸಾಮಾನುಗಳ ಬೆಲೆ ಯದ್ವಾತದ್ವಾ ಏರುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ ಈ ರೀತಿ ತೆರಿಗೆ ಹೆಚ್ಚಿಗೆ ಹಾಕುವುದು ಖಂಡಿತವಾಗಿ ಜನಸಾಮಾನ್ಯರಿಗೆ ಯಾವರೀತಿಯ ಶಕ್ಯವನ್ನೂ ಉಂಟು ಮಾಡುವುದಿಲ್ಲ. ಈ ತೆರಿಗೆ ಖಂಡಿತವಾಗಿ ನಾಗರೀಕರ ಮೇಲೆ ಬೀಳುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಮೊದಲು ಅರ್ಥ ಮಾಡಿಕೊಳ್ಳಬೇಕು. ತೆರಿಗೆಯನ್ನು ಏರಿಸುವುದರ ಬದಲು ತೆರಿಗೆ ವಸೂಲಿ ಕ್ರಮವನ್ನು ಬಿಗಿಗೊಳಿಸಿ ; ಸೋರಿ ಹೋಗುವುದನ್ನು ತಪ್ಪಿಸಿ, ಇದರಿಂದ ವರಮಾನ ಹೆಚ್ಚುವುದಕ್ಕೆ ಅವಕಾಶವಿದೆ ಎಂದು ನಾವು ಆವತ್ತಿನಿಂದಲೂ ಒತ್ತಾಯ ಮಾಡುತ್ತಿದ್ದೇವೆ. ಆದರೆ, ಮಾನ್ಯ ಮಂತ್ರಿಗಳು ತೆರಿಗೆಗಳನ್ನು ಜನ ಸಾಮಾನ್ಯರ ಮೇಲೆ ಹೇರುವ ಧೋರಣೆಯನ್ನು ಬಿಡಬೇಕೆಂದು ನಾವು ಕೇಳಿಕೊಳ್ಳುತ್ತಿದ್ದರೂ ಒಂದಲ್ಲ ಒಂದು ರೂಪದಲ್ಲಿ ಅವರು ತೆರಿಗೆಯ ಹೊರೆಯನ್ನು ಹೇರುತ್ತಿರುವುದು ಶೋಚನೀಯವಾದ ಸಂಗತಿ ಯಾಗಿದೆ. ಸರ್ಕಾರದವರು ನಾವೊಂದು ಹೊಸ ವಿಧಾನವನ್ನು ಕಂಡುಹಿಡಿದಿದ್ದೇವೆ ಎಂದು ಹೇಳಬಹುದು. ಆದರೆ, ಅದರಿಂದಲೂ ತಪ್ಪಿಸಿಕೊಳ್ಳುವುದಕ್ಕೆ ವರ್ತಕರು ನಾನಾ ವಿಧವಾದ ಕ್ರಮಗಳನ್ನು ಅನುಸರಿಸುತ್ತಾರೆ. ಹತ್ತು ಲಕ್ಷ ಟರ್ನ್‌ಓವರ್ ಮಾಡುವವರು ಹತ್ತು ಪರ್ಸೆಂಟ್ ತೆರಿಗೆಯನ್ನು ಕೊಡಬೇಕೆಂದಾಗ, ಅವರು ಎರಡು ಮೂರು ಅಂಗಡಿಗಳನ್ನು ತೆರೆದು, ಟರ್ನ್‌ಓವರ್ ಹತ್ತು ಲಕ್ಷದ ಒಳಗೇ ಬರುವ ಹಾಗೆ ವ್ಯವಸ್ಥೆ ಮಾಡಿಕೊಂಡು ಬಿಡುತ್ತಾರೆ. ನನಗೆ ತಿಳಿದ ಹಾಗೆ, ಒಂದೇ ಅಂಗಡಿ ಇಟ್ಟುಕೊಂಡಿದ್ದ ಒಬ್ಬ ವ್ಯಾಪಾರಿ ಇಂದು ಮೂರು ಅಂಗಡಿಗಳನ್ನು ಇಟ್ಟುಕೊಂಡಿದ್ದಾನೆ. ವರ್ತಕರು ಹೀಗೆ ಮಾಡಿ ಸರ್ಕಾರದ

ಕಣ್ಣಿಗೆ ಮಣ್ಣೆರೆಚುವುದಲ್ಲದೆ, ಜನರಿಗೂ ಅನಾನುಕೂಲವಾದ ಪರಿಸ್ಥಿತಿಯನ್ನು ತಂದೊಡ್ಡುತ್ತಾರೆ. ಆದುದರಿಂದ, ಒಂದಲ್ಲ ಒಂದು ರೂಪದಲ್ಲಿ ಬಳಕೆ ವಸ್ತುಗಳ ಬೆಲೆ ಏರುತ್ತಿರುವ ಈ ಸಂದರ್ಭದಲ್ಲಿ ಹೆಚ್ಚು ಹೆಚ್ಚು ತೆರಿಗೆ ವಿಧಿಸುವ ಪದ್ಧತಿಯನ್ನು ಸರ್ಕಾರ ಕೈಬಿಡಬೇಕೆಂದು ಹೇಳಬಯಸುತ್ತೇನೆ.

ಐದು ಲಕ್ಷದಿಂದ ಹತ್ತು ಲಕ್ಷದವರೆಗೆ ಒಂದು ಸ್ಲಾಬ್ ಇಟ್ಟು, ಈ ಹಣಕ್ಕೆ ಏಳೂವರೆ ಪರ್ಸೆಂಟ್ ತೆರಿಗೆ ಹಾಕಿ, ಅದನ್ನು ಸುಲಭವಾಗಿ ವಸೂಲು ಮಾಡುವುದಕ್ಕೆ ಅವಕಾಶವಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಮಾರಾಟ ತೆರಿಗೆಯಲ್ಲಿ ಸಿಂಗಲ್ ಪಾಯಿಂಟ್ ಮಲ್ಟಿ ಪಾಯಿಂಟ್ ಮಲ್ಟಿಪಾಯಿಂಟ್ ಮಲ್ಟಿಪಾಯಿಂಟಾಗಿ ಹಲವಾರು ತೆರಿಗೆಗಳನ್ನು ಹಾಕುತ್ತಿದ್ದಾರೆ. ಅದರ ಜೊತೆಗೆ ಇದನ್ನೂ ಹಾಕುತ್ತಿದ್ದಾರೆ. ಹೀಗೆ ನಾನಾ ರೂಪದಲ್ಲಿ ತೆರಿಗೆ ಹಾಕುವುದು ನೀತಿಗೆ ವಿರುದ್ಧವಾದುದಾಗಿದೆ. ಯಾವ ವರ್ತಕನೂ ತನ್ನ ಕೈಯಿಂದ ತೆರಿಗೆಯನ್ನು ಕೊಡುವುದಿಲ್ಲ. ಅವನು ಯಾವ ತೆರಿಗೆ ಕೊಡಬೇಕಾದರೂ ಸಾಮಾನುಗಳ ಬೆಲೆಯ ಮೇಲೆ ಹಾಕಿ, ಅದನ್ನು ಬಳಕೆದಾರರಿಂದ ಕೊಡಿಸುತ್ತಾನೆ. ಸರ್ಕಾರದವರು ವಿಧಿಸಿರುವ ಮಾರಾಟ ತೆರಿಗೆ, ಆಕ್ಟ್ರಾಯಿ, ವಾಹನ ತೆರಿಗೆ, ವರಮಾನ ತೆರಿಗೆ ಇವೆಲ್ಲವೂ ಅಂತಿಮವಾಗಿ ಬಳಕೆದಾರನ ಮೇಲೆ ಬೀಳುತ್ತವೆ. ಆದುದರಿಂದ, ತೆರಿಗೆ ಹೆಚ್ಚು ಮಾಡುವುದಕ್ಕಿಂತ ತೆರಿಗೆಯನ್ನು ಯಾವ ರೀತಿ ವಸೂಲು ಮಾಡಬೇಕೆನ್ನುವುದು ಮತ್ತು ವಸೂಲು ಮಾಡುವ ವಿಧಾನವನ್ನು ಸರಿಪಡಿಸುವುದು ಬಹಳ ಮುಖ್ಯ. ಕಳೆದ ಐದು ವರ್ಷಗಳಿಂದ ಪ್ರತಿ ವರ್ಷದಲ್ಲೂ ಹತ್ತು-ಹದಿನೈದು ಕೋಟಿ ರೂಪಾಯಿಗಳಷ್ಟು ಹಣವನ್ನು ಮಾರಾಟ ತೆರಿಗೆಯ ಕರವನ್ನು ಹೆಚ್ಚು ಮಾಡುವುದರ ಮುಖಾಂತರ ಸರ್ಕಾರದವರು ಗಳಿಸುತ್ತಿದ್ದಾರೆ. ಇಂಥಾ ಒಂದು ವರ್ಷದಲ್ಲಿ ನಾವು ಮಾರಾಟ ತೆರಿಗೆಯನ್ನು ಹೆಚ್ಚಿಸಿಲ್ಲ ಎಂದು ಮಾನ್ಯ ಅರ್ಥ ಮಂತ್ರಿಗಳು ತಿಳಿಸುವರೆ ? ಪ್ರತಿ ವರ್ಷವೂ ಅದನ್ನು ಅವರು ಹೆಚ್ಚು ಮಾಡುತ್ತಾ ಬಂದಿದ್ದಾರೆ. ಇದರಿಂದಾಗಿ, ಅದರ ಪ್ರಭಾವ ನೇರವಾಗಿ ಬಳಕೆದಾರನ ಮೇಲೆ ಬೀಳುತ್ತದೆ. ಸಾಮಾನುಗಳ ಬೆಲೆ ಏರಿಕೆಗೆ ಸರ್ಕಾರ ಪರೋಕ್ಷವಾಗಿ ಕಾರಣವಾಗಿದೆ. ಇತ್ತ ಕಡೆ ಕೇಂದ್ರ ಸರ್ಕಾರ ಎಕ್ಸೈಸ್ ಟ್ಯಾಕ್ಸ್ ಮತ್ತು ರೈಲ್ವೆ ಟ್ಯಾಕ್ಸ್‌ನ್ನು ಯದ್ವಾತದ್ವ ಹಾಕುತ್ತಿದೆ. ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಮೂರು ವರ್ಷಗಳ ಹಿಂದೆ ಆಕ್ಟ್ರಾಯ್‌ನಿಂದ ಬರುತ್ತಿದ ಆದಾಯ ನಾಲ್ಕು ಕೋಟಿ ರೂಪಾಯಿಗಳಾಗಿದ್ದರೆ, ಇಂದು ಹತ್ತು ಕೋಟಿ ರೂಪಾಯಿಗಳಷ್ಟು ಬರುತ್ತಿದ. ಆದುದರಿಂದ, ತೆರಿಗೆಗಳ ಮೇಲೆ ತೆರಿಗೆಯನ್ನು ಹಾಕುವುದು ಸರಿಯಲ್ಲ. ಇದರಿಂದ ವ್ಯಾಪಾರಸ್ಥರಿಗೆ ದಾರಿಯನ್ನು ತೋರಿಸಿ ಕೊಟ್ಟ ಹಾಗಾಗುತ್ತದೆ. ಅಧಿಕಾರಿಗಳಿಗೆ ಹಣ ಕೊಟ್ಟು, ಟರ್ನ್‌ಓವರ್ ಕಡಿಮೆ ಮಾಡಿ, ಬೇನಾಮಿ ಅಂಗಡಿಗಳನ್ನು ತೆರೆದು ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳುವುದರ ಮೂಲಕ ಸಾಮಾನ್ಯ ಜನರ ಮೇಲೆ ಹೆಚ್ಚಿನ ಹೊರೆಯನ್ನು ಹಾಕುತ್ತಾರೆ. ಆದುದರಿಂದ, ಇದನ್ನು ತಪ್ಪಿಸಬೇಕೆಂದು ತಿಳಿಸಿ, ಇಷ್ಟು ಹೊತ್ತು ಮಾತ ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ. (ಚಿಕ್ಕಪೇಟೆ);—ಸನ್ಮಾನ್ಯ ಅಧ್ಯಕ್ಷಣಿಯವರೇ, ಹಣಕಾಸಿನ ಸಚಿವರಲ್ಲಿ ನಾನು ಒಂದು ವಿವರಣೆಯನ್ನು ಕೇಳಬಯಸುತ್ತೇನೆ, ಸೇಲ್ಸ್ ಟ್ಯಾಕ್ಸ್ ಎಂದು ಏನು ಇಂಟ್ರೊಡ್ಯೂಸ್ ಮಾಡಿದ್ದಾರೆ ಅದು ಸಾಮಾನ್ಯ ಜನರ ಮೇಲೆ ಆ ತೆರಿಗೆ ಇರುವುದಿಲ್ಲವೇ ? ಏತಕ್ಕೆಂದರೆ ಈಗ ನಾವು ಸಾಮಾನ್ಯ ಜನರು ಕೊಂಡುಕೊಳ್ಳತಕ್ಕಂಥರಾಗಿ ಜೋಳ ಸೈಕಲ್ ಪ್ರತಿಯೊಂದು ವಸ್ತುಗಳ ಮೇಲೂ ಈ ಸೇಲ್ಸ್ ಟ್ಯಾಕ್ಸ್ ಹಾಕುತ್ತೇವೆ ಆದುದರಿಂದ ಈಗ ತಾವು ತಂದಿರತಕ್ಕಂಥ ಮಸೂದೆಯಿಂದ ಅದು ಇರುವುದಿಲ್ಲವೇ ಅಥವಾ ಇರುತ್ತದೆಯೇ , ಎಂದು ಕೇಳುತ್ತೇನೆ.

ಶ್ರೀ ಎಂ. ವೈ ಘೋರ್ಪಡೆ.—ಇರುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಹಾಗಾದರೆ ಒಂದು ಕ್ರಿಯಾಲೋಪ ಎತ್ತುತ್ತೇನೆ ಇದು ಸೇಲ್ಸ್ ಟ್ಯಾಕ್ಸ್ ಆಗುವುದಿಲ್ಲ ಇದು ಟರ್ನ್ ಓವರ್ ಟ್ಯಾಕ್ಸ್ ಆಗುತ್ತದೆ. ತಾವು ಇಂಟ್ರೊಡ್ಯೂಸ್ ಮಾಡಿರತಕ್ಕಂಥದು ಸೇಲ್ಸ್ ಟ್ಯಾಕ್ಸ್ ಆಧಾರದ ಮೇಲೆ, ಆದುದರಿಂದ ಇದು ತಪ್ಪು It should come as turnover tax. then we can discuss , not as sales-tax,

2-30 P.M.

ಶ್ರೀ ಎಂ. ವೈ. ಘೋರ್ಪಡೆ.—ಅಡಿಷನಲ್ ಸೇಲ್ಸ್ ಟ್ಯಾಕ್ಸ್ ಎಂದು ಇದೆ.

ಶ್ರೀ ಕೆ. ಎಂ. ನಾಗಣ್ಣ.—ಸೇಲ್ಸ್ ಟ್ಯಾಕ್ ಮತ್ತು ಟರ್ನ್ ಓವರ್ ಟ್ಯಾಕ್ಸ್‌ಗೂ ಬಹಳ ವ್ಯತ್ಯಾಸವಿದೆ ಟರ್ನ್ ಓವರ್ ಟಾಕ್ಸ್‌ನ್ನು ಯಾರು ವ್ಯಾಪಾರ ಮಾಡುತ್ತಾರೋ ಅವರು ಅದನ್ನು ಕೊಡಬೇಕಾಗಿ ಬರುತ್ತದೆ. ಆದುದರಿಂದ ಇದರ ಬಗ್ಗೆ ಕ್ಲಾರಿಫೈ ಮಾಡಬೇಕಾಗಿದೆ.

ಶ್ರೀ ಎಂ. ವೈ ಘೋರ್ಪಡೆ.—ಇದೇನು ಹೊಸದಲ್ಲ. ಇದನ್ನು ತಮಿಳು ನಾಡಿನಲ್ಲಿ ಇಂಟ್ರೊಡ್ಯೂಸ್ ಮಾಡಿದಾರೆ. ಇದು ಕಾನೂನಿಗೆ ವಿರುದ್ಧವಾಗಿದೆ ಎಂದು ಯಾರೂ ಕೋರ್ಟಿಗೆ ಹೋಗಿರುವುದಿಲ್ಲ. ಆದುದರಿಂದ ಕಾನೂನಿನ ವಿಷಯವನ್ನು ಎತ್ತುವುದು ಸೂಕ್ತವಲ್ಲ ತಾವು ಬೇಕಾದರೆ ಒಟ್ಟಿಗೆ ಎಲ್ಲಾ ಪ್ರಶ್ನೆಯನ್ನೂ ಕೇಳಿ ಆ ಮೇಲೆ ಉತ್ತರ ಕೊಡುತ್ತೇನೆ.

ಶ್ರೀ ಕೆ ಎಂ. ನಾಗಣ್ಣ.—ಮೊದಲನೆಯದಾಗಿ ಇದು ಚರ್ಚೆಗೇ ಅರ್ಹವಲ್ಲ. ಇದು ಟರ್ನ್ ಓವರ್ ಟ್ಯಾಕ್ಸ್ ಎಂದು ಮಾರ್ಪಾಡು ಆಗಿ ಬಂದರೆ ಇದರ ಬಗ್ಗೆ ಚರ್ಚೆ ಮಾಡಬಹುದು ಇಲ್ಲದಿದ್ದರೆ ಚರ್ಚೆ ಮಾಡುವ ಹಾಗಿಲ್ಲ. ಅದಕ್ಕಾಗಿ ನಾನು ಕ್ರಿಯಾಲೋಪ ಎತ್ತಿದ್ದೇನೆ.

ಅಧ್ಯಕ್ಷರು.—ಇದು ಕ್ರಿಯಾಲೋಪವಾಗುವುದಿಲ್ಲ. ಇದು ಲೀಗಲ್ ಕ್ವಶ್ಚನ್ ಆಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಅಡಿಷನಲ್ ಟ್ಯಾಕ್ಸ್ ಎಂದು ಹಾಕಿದ್ದೇವೆ ಇದರಲ್ಲಿ ಯಾವ ತಪ್ಪೂ ಇಲ್ಲ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷಣೀಯವರೇ, ಈ ಮಸೂದೆಯನ್ನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಶ್ರೀ ನಾಗಣ್ಣನವರು ಎತ್ತಿದಂಥ ಪ್ರಶ್ನೆ ಬಹಳ ಗಂಭೀರವಾಗಿದೆ. ಕಾರಣವೇನೆಂದರೆ ಮಾರಾಟ ತೆರಿಗೆಯನ್ನು ಹಾಕತಕ್ಕಂಥ ಪ್ರಯತ್ನದಲ್ಲಿ ಒಟ್ಟು ಟರ್ನ್ ಓವರ್ ಏನಾಗುತ್ತದೆ ಅಥವಾ ಅವರ ವ್ಯಾಪಾರ ಎಷ್ಟು ಆಗುತ್ತದೆ ಅದನ್ನಲ್ಲಾ ಗಮನಕ್ಕೆ ತೆಗೆದುಕೊಂಡು ತೆರಿಗೆಯನ್ನು ಹಾಕತಕ್ಕಂಥ ಪ್ರಯತ್ನ ಮಾಡಿದ್ದಾರೆ. ಶ್ರಿಮಾನ್ ನಾಗಣ್ಣನವರು ಹೇಳಿದಂತೆ ಇದು ಮಾರಾಟ ತೆರಿಗೆ ಆಗುವುದಿಲ್ಲ. ಇದು ಟರ್ನ್ ಓವರ್ ತೆರಿಗೆಯಾಗುತ್ತದೆ ಎನ್ನುವ ವಾದವನ್ನು ಒಪ್ಪುತ್ತೇನೆ. ಇದಗಿಂದ ಏನು ತೊಂದರೆ, ಭಾದಕವಾಗುತ್ತದೆ ಎಂಬುದನ್ನು ಸರ್ಕಾರದವರು ಗಮನಿಸಬೇಕು ಇವತ್ತು ನಮ್ಮ ಹಣಕಾಸಿನ ಸಚಿವರು ಈ ಮಸೂದೆಯನ್ನು ತಂದಿರತಕ್ಕಂಥದ್ದು ಕೇವಲ ೫,೭೧೪ ಜನರಿಗೆ ಲಾಭವಾಗುತ್ತದೆಂದು ಆ ಜನರು ಇದನ್ನು ಕೊಡಬೇಕಾಗುತ್ತದೆ. ಆದುದರಿಂದ ಬಾಕಿ ಯವರಿಗೆ ಏನೂ ತೊಂದರೆ ಇಲ್ಲವೆಂದು ತಂದಿದ್ದಾರೆ. ಈಗಾಗಲೇ ತಂದಿರತಕ್ಕಂಥ ಮಸೂದೆಯಂ ಪ್ರಕಾರ ೧೦ ಲಕ್ಷಕ್ಕೂ ಮೇಲ್ಪಟ್ಟು ಟರ್ನ್ ಓವರ್ ಇದ್ದರೆ ಅವರು ಶೇಕಡ ೮ ರಷ್ಟು ತೆರಿಗೆಯನ್ನು ಕೊಡಬೇಕಾಗಿದು ಅದನ್ನು ೧೦ ರಷ್ಟು ಮಾಡಿದ್ದೀರಿ. ಮತ್ತೆ ೬ ಲಕ್ಷದಿಂದ ೧೦ ಲಕ್ಷದವರೆಗೆ ಟರ್ನ್ ಓವರ್ ಇರತಕ್ಕಂಥವರಿಗೆ ಶೇಕಡ ೭½ ತೆರಿಗೆಯನ್ನು ಹೆಚ್ಚಿಗೆ ವಿಧಿಸುತ್ತಿದ್ದೀರಿ ಎಲ್ಲರಿಗೂ ಅನುಭವಕ್ಕೆ ಬಂದಿರತಕ್ಕಂಥವರ ಪ್ರಕಾರ ತಾವು ಏಷ್ಟೇ ತೆರಿಗೆಯನ್ನು ಹಾಕಿದರೂ ವ್ಯಾಪಾರಸ್ಥರು ಅವರ ಕೈಯಿಂದ ಕೊಡುವುದಿಲ್ಲ ಮತ್ತೆ ಪುನಃ ಅದು ಸಾಮಾನ್ಯ ಜನರ ಮೇಲೆ ಹೆಚ್ಚಿನ ಹೊರೆಯಾಗುತ್ತಾ ಹೋಗುತ್ತದೆ. ಈಗ ಹೋಲ್ ಸೇಲ್‌ನವರು ರೀಟೇಲ್‌ನವರಿಗೆ ಸೇಲ್ಸ್ ಟ್ಯಾಕ್ ಸೇರಿಸಿಆವರಿಗೆ ಮಾರಾಟ ಮಾಡುತ್ತಾನೆ. ರೀಟೇಲ್ ನವರು ಕನ್‌ಸ್ಯೂಮರ್ಸ್‌ಗೆ ಮಾರಾಟ ಮಾಡುವಾಗ ಅವನು ಮತ್ತೆ ಪುನಃ ಸೇಲ್ಸ್ ಟ್ಯಾಕ್ಸ್ ಸೇರಿಸಿ ಮಾರಾಟ ಮಾಡುತ್ತಾನೆ ಇದರಿಂದ ಕೊನೆಗೆ ಬಳಕೆದಾರನಿಗೆ ಅತಿ ಹೆಚ್ಚಿನ ಕರಭಾರ ಬೀಳುತ್ತದೆ. ಯಾರು ಯಾರು ವ್ಯಾಪಾರಸ್ಥರಿದ್ದಾರೆ, ಅವರು ಹೋಲ್‌ಸೇಲ್‌ನವರು ಇರಬಹುದು ಪ್ರಡ್ಯೂಜರ್ ಇರಬಹುದು, ರಿಟೇಲ್ ಆಗಿರಬಹುದು, ಎಲ್ಲಾ ಹಂತದಲ್ಲೂ ಸರ್ಕಾರಕ್ಕೆ ಕೊಟ್ಟಂಥ ವಾಣಿಜ್ಯ ತೆರಿಗೆಯನ್ನು ಒಬ್ಬರು ಇನ್ನೊಬ್ಬರ ಮೇಲೆ ವರ್ಗಾಯಿಸಿ ಕೊಳ್ಳುತ್ತಾ ಹೋಗಿ ಕೊನೆಗೆ ಅದು ಬಳಕೆದಾರರ ಮೇಲೆ ಬೀಳುತ್ತದೆ. ಆದುದರಿಂದ ಇವತ್ತು ನಮಗೆ ತೊಂದರೆ ಬರತಕ್ಕಂಥದ್ದು ಏನೆಂದರೆ ೫ ಲಕ್ಷದ ಒಳಗಡೆ ವ್ಯಾಪಾರ ಮಾಡತಕ್ಕಂಥ ಒಬ್ಬ ವ್ಯಾಪಾರಸ್ಥನ ಹತ್ತಿರ ಒಂದು ಕ್ವಿಂಟಲ್ ಅಕ್ಕಿಯನ್ನು ತಂದರ ಅವನು ೧೦೦ ಕ್ಕೆ ೪ ರೂಪಾಯಿ ತೆರಿಗೆಯನ್ನು ಹಾಕುತ್ತಾನೆ. ೫–೧೦ ಲಕ್ಷಕೂ ಮೇಲ್ಪಟ್ಟು ಟರ್ನ್ ಓವರ್ ಇರತಕ್ಕಂಥವರು ಅದೇ ಒಂದು ಕ್ವಿಂಟಾಲ್ ಅಕ್ಕಿಗೆ ೧೦೫ ರಿಂದ ೧೦೭, ೧೦೮-ರೂಪಾಯಿಗಳಿಗೆ ಮಾರಾಟ ಮಾಡುತ್ತಾನೆ. ೫ ಲಕ್ಷ ರೂ.ಗಳಿಗಿಂತ ಕಡಿಮೆ ಇರತಕ್ಕಂಥ ವ್ಯಾಪಾರಸ್ಥನು ಒಂದು ಕ್ವಿಂಟಾಲಿಗೆ ೧೦೪ ರೂಪಾಯಿಗಳಿಗೆ ಮಾರಾಟ ಮಾಡಿದರೆ ಅದನ್ನೇ ೫ ರಿಂದ ೧೦ ಲಕ್ಷ ರೂಪಾಯಿಗಳಿಗಿಂತ ಮೇಲ್ಪಟ್ಟು ಇರತಕ್ಕಂಥವನ್ನು ೧೦೭–೧೦೮ ರೂ. ಗಳಿಗೆ ಮಾರಾಟ ಮಾಡುತ್ತಾನೆ. ಇದು ಸಾಮಾನ್ಯವಾಗಿ ಬಳಕೆದಾರರಿಗೆ ಗೊತ್ತಾಗುವುದಿಲ್ಲ. ಆದುದರಿಂದ ಇದು ತಪ್ಪು. ಇದು ಸರಿಯಲ್ಲ. ಇದರಿಂದ ಬಳಕೆದಾರರಿಗೆ ಮೋಸ ಮಾಡಿದಂತಾಗುತ್ತದೆ ಒಂದು ಕಡೆ ಕ್ವಿಂಟಾಲಿಗೆ ೧೦೪ ರೂಪಾಯಿಗಳ ಹಾಗೆ ಮಾರಾಟ ಮಾಡುವುದು ಮತೊಂದು ಕಡೆ ಅದೇ ವಸ್ತುವಿಗೆ ಕ್ವಿಂಟಾಲಿಗೆ ೧೦೭–೧೦೮ ರೂಪಾಯಿಗಳ ಹಾಗೆ ಮಾರಾಟ ಮಾಡುವುದು ಈ ರೀತಿ ಬೇರೆ ಬೇರೆ ಕಡೆ ಬೇರೆ ಬೇರೆ ರೀತಿಯ ತೆರಿಗೆಯನ್ನು ವಿಧಿಸಿದರೆ ಮೋಸ ಮಾಡಿದಂತಾಗುತ್ತದೆ. ಇವತ್ತು ಹೆಚ್ಚು ತೆರಿಗೆಯನ್ನು ಹಾಕಬೇಕು ಸರ್ಕಾರಕ್ಕೆ ಹೆಚ್ಚು ಆದಾಯ ತರಬೇಕು

ಎನ್ನುವುದರ ಬಗ್ಗೆ ಸರ್ಕಾರದ ಆಸಕ್ತಿ ಇದ್ದರೂ, ಕೂಡ ಒಂದೇ ತರಹದ ತೆರಿಗೆಯನ್ನು ಇದರಿಂದ ಹಾಕಿದಂತಾಗುವುದಿಲ್ಲ. ಈ ರೀತಿ ಟರ್ನ್ ಓವರ್ ಮೇಲೆ ಹಾಕುವುದರಿಂದ, ಪದಾರ್ಥಗಳನ್ನು ಉಪಯೋಗಿಸುವ ಬಳಕೆದಾರನ ಮೇಲೆ ಈ ತೆರಿಗೆ ಬೀಳುತ್ತದೆ ಅಂತಿಮವಾಗಿ ಬಳಕೆದಾರನು ತಲೆ ಕೊಡಬೇಕೇ ವಿನಹ ವ್ಯಾಪಾರಸ್ಥನಲ್ಲ. ಮಾನ್ಯ ಫೋರ್ಜಡೆಯವರೂ ಸಹ ಒಬ್ಬ ಕೈಗಾರಿಕೋದ್ಯಮಿ ಅವರಿಗೆ ಇದರಲ್ಲಿ ಸಾಕಷ್ಟು ಅನುಭವವಿದೆ. ಅವರು ಇದನ್ನು ದೀರ್ಘವಾಗಿ ಪರೀಶೀಲನೆ ಮಾಡಬೇಕು, ಅವರು ತಮ್ಮ ಕಾರ್ಖಾನೆಯ ಆದಿನ್ನು ಯಾವ ರೀತಿ ಮಾರಾಟ ಮಾಡುತ್ತಾರೆನ್ನುವುದು ಅವರಿಗೆ ಗೊತ್ತು ಯಾರೂ ತೆರಿಗೆಯನ್ನು ಅವರ ಕೈಯಿಂದ ಕೊಡುವುದಿಲ್ಲ ತಮ್ಮ ಆದಾಯವನ್ನು ಕಡಿಮೆ ಮಾಡಿಕೊಂಡು ತೆರಿಗೆಯನ್ನು ಕೊಡುವುದಿಲ್ಲ. ಆದುದರಿಂದ ಈ ತೆರಿಗೆ ಬಳಕೆದಾರನ ಮೇಲೆ ಬೀಳುತ್ತದೆ. ಇಂದು ವ್ಯಾಪಾರಸ್ಥರಲ್ಲಿ ಎರಡು ವರ್ಗಗಳನ್ನು ಸೃಷ್ಟಿ ಮಾಡಿದ್ದಾರೆ. ಹೆಚ್ಚು ಟರ್ನ್ ಓವರ್ ಪಡೆಯುವ ವರ್ಗ ಒಂದಾದರೆ ಇನ್ನೊಂದು ಕಡಿಮೆ ಟರ್ನ್ ಓವರ್ ಪಡೆಯುವ ವರ್ಗ ಕಡಿಮೆ ಟರ್ನ್ ಓವರ್ ಇರುವವನು ಕಡಿಮೆ ದರದಲ್ಲಿ ಪದಾರ್ಥಗಳನ್ನು ಮಾರಿದರೆ, ಹೆಚ್ಚು ಟರ್ನ್ ಓವರ್ ಇರುವವನು ಹೆಚ್ಚು ದರದಲ್ಲಿ ಪದಾರ್ಥಗಳನ್ನು ಮಾರುತ್ತಾನೆ. ಆದುದರಿಂದ ಸರ್ಕಾರದವರು ಟರ್ನ್ ಓವರ್ ಸಿದ್ಧಾಂತದಮೇಲೆತೆರಿಗೆ ಹಾಕುವುದಕ್ಕೆ ಪ್ರಯತ್ನ ಪಡಬಾರದು. ಹೋದವರ್ಷ ಈ ತೆರಿಗೆಯನು ಹಾಕಿದಾಗ,ಆದನು ಅಲ್ಲಿಗೆ ನಿಲ್ಲಿಸುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ನಿಲ್ಲಿಸಲಿಲ್ಲ, ಮುಂದುವರಿಸಿಕೊಂಡು ಬಂದರು. ಅಷ್ಟೆ ಅಲ್ಲದೆ ಈ ವರ್ಷ ಐದರಿಂದ ಹತ್ತು ಲಕ್ಷ ಟರ್ನ್ ಓವರ್ ಇರುವವರಿಗೆ ಹಾಕಿದ್ದಾರೆ ಹೀಗೆ ಮಾಡಿ ಇವರ ರಾಕ್ಷಸೀ ಕೈಯನ್ನು ಮತ್ತೆ ಚಾಚುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅವರ ಈ ಕೈಯನ್ನು ಎಲ್ಲಿಯವರಿಗೆ ನೂಕುವುದಕ್ಕೆ ಸಾಧ್ಯವೋ ಅಲ್ಲಿಯವರೆಗೆ ನೂಕಿ ಕೊನೆಗೆ ಬಳಕೆದಾರನ ತಲೆಯ ಮೇಲಿಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮಾನ್ಯ ಫೋರ್ಜಡೆಯವರು ಕೇಂದ್ರ ಸರ್ಕಾರದ ಆಯವ್ಯಯ ಪತ್ರದ ವಿಶ್ಲೇಷಣೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಭಾಷಣದಲ್ಲಿ ಬಹಳ ಗಹನವಾಗಿ ಮಾಡಿದ್ದಾರೆ. ಅದು ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಆದನ್ನೂ ನಾನು ವಿವರವಾಗಿ ಓದಿಲ್ಲ. ಓದಬೇಕೆಂದಿದ್ದೇನೆ "ಇದು ಯಂಥಾಸ್ಥಿತಿಯ ಆಯವ್ಯಯ. ಇದರಲ್ಲಿನೂ ಸೂತನ ಪರಿಸರವನ್ನು ಕಂಡುಹಿಡಿದಿಲ್ಲ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹಣದುಬ್ಬರವನ್ನು ತಡಗಟ್ಟುವುದಾಗಲೀ ಅಥವಾ ನಿರುದ್ಯೋಗ ನಿವಾರಣೆ ಮಾಡುವುದಾಗಲೀ ಅಥವಾ ಗ್ರಾಮಾಭಿವೃದ್ಧಿ ಕಾರ್ಯಗಳನು ಕೈಗೊಳ್ಳುವುವಾಗಲಿ ಹೊಸ ರೀತಿಯ ನೈಪುಣ್ಯತೆಯನ್ನು ಕೇಂದ್ರ ಸರ್ಕಾರ ತನ್ನ ಆಯವ್ಯಯದಲ್ಲಿ ಅಳವಡಿಸಿಲ್ಲ ಎಂದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅವರು ಹೇಳಿದ್ದು ತಪ್ಪೇ ಅಥವಾ ಸರಿಯೇ ಎಂದು ನಾನು ಈಗ ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅವರು ಹಣದುಬ್ಬರವನು ತಡೆಗಟ್ಟುವುದರಲ್ಲಿ ಕೇಂದ್ರ ಸರ್ಕಾರದ ಆಯವ್ಯಯ ಸಹಾಯಕವಾಗಿಲ್ಲ ಎಂದು ಹೇಳಿದ್ದಾರೆ. ಈಅಭಿಪ್ರಾಯದಿಂದ,ಹಣದುಬ್ಬರವನು ತಡೆಹಿಡಿಯುವಕೆಲಸವನ್ನು ಮಾಡಬೇಕೆನ್ನುವ ಮನಸ್ಸನ್ನು ಶ್ರೀಫೋರ್ಜಡೆಯವರಿಗೆ ಇದ್ದಂತೆ ಕಾಣುತ್ತಿದೆ, ಇಂತಹವರು ತೆರಿಗೆ ಹಾಕುವ ಸನ್ನಿವೇಶದಲ್ಲಿದ್ದಾಗ ಹಣದುಬ್ಬರವನ್ನು ತಡೆಹಿಡಿಯುವ ಮಟ್ಟದಲ್ಲಿ ತೆರಿಗೆಯನ್ನು ಹಾಕಲಿಕ್ಕೆ ಪ್ರಯತ್ನ ಮಾಡಿದ್ದಾರೆಯೇ, ಮಾಡಿಲ್ಲ. ಟರ್ನ್ ಓವರ್ ತೆರಿಗೆಯನ್ನು ಜಾರಿಗೆ ತರುವಾಗ, ಹೊಸ ವಿಧಾನ ಮತ್ತು ಹೊಸ ತಂತ್ರ ಪೂಂದನ್ನು ಕಂಡು ಹಿಡಿದಿದ್ದೇವೆ ಎಂದು ಹೇಳಿ, ಮಾರಾಟ ತೆರಿಗೆಯನ್ನು ಪರಿವರ್ತನೆ ಮಾಡಿ ಆದಕ್ಕೆ ಟರ್ನ್ ಓವರ್ ತೆರಿಗೆ ಎಂದು ಹೆಸರಿಟ್ಟು ಆದಕೊಂದು ವ್ಯಾಖ್ಯಾನ ಕೊಟ್ಟು ತಂದಿದ್ದಾರೆ. ಹೀಗೆಯೆ ಆದರೆ, ಮುಂದಿನ ವರ್ಷ ಐದು ಲಕ್ಷಕ್ಕಿಂತ ಕಡಿಮೆ ಟರ್ನ್ ಓವರ್ ಇರುವವರಿಗೂ ಹಾಕುತ್ತಾರೆ ಎನ್ನುವ ಅನುಮಾನ ನನಗಿದೆ. ಹಣದುಬ್ಬರವನು ತಪ್ಪಿಸುವುದಕೆ ಸಹಾಯಕವಾಗುವ ರೀತಿಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ನಮ್ಮ ಹಣಕಾಸಿನ ಸಚಿವರು ಯಾವ ರೀತಿಯು ತೆರಿಗೆ ಹಾಕುವುದಕ್ಕೂ ಪ್ರಯತ್ನ ಪಟ್ಟಿಲ್ಲ. ಈಗ ಹೊಸದಾಗಿ ಹಾಕಿರುವ ತೆರಿಗೆಯಿಂದ ಹೆಚ್ಚು ಹಣ ಪ್ರಸಾರವಾಗುತ್ತದೆ ಮತ್ತು ಪದಾರ್ಥಗಳ ಬೆಲೆ ಜಾಸ್ತಿಯಾಗುವುದಕ್ಕೆ ಅವಕಾಶವನ್ನು ದಿನೇ ದಿನೇ ಕಲ್ಪಿಸಿಕೊಡುತಿದ್ದಾರೆ ಎಂದು ನಾನು ಆಪಾದನೆ ಮಾಡುತ್ತೇನೆ. ಹಣದುಬ್ಬರವನ್ನು ಕಡಿಮೆ ಮಾಡುವ ಆಯವ್ಯಯವನ್ನು ತಯಾರಿಸಬೇಕಾಗಿತ್ತೆಂದು ಸವಾಲ್ ಹಾಕಿದ ವ್ಯಕ್ತಿ ತನ ಕೈಯಲ್ಲಿ ಅಧಿಕಾರವಿದಾಗ ಅತನೇ ತೆರಿಗೆ ಹಾಕುವ ಸಂದರ್ಭ ಬಂದಾಗ ಬೆಲೆ ಏರಿಕೆಪಾಗು ಹಣದುಬ್ಬರವನ್ನು ಕಡಿಮೆಮಾಡುವುದಕ್ಕೆ ಸಹಾಯಕವಾಗುವ ರೀತಿಯಲ್ಲಿ ಕೆಲಸ ಮಾಡಿದ್ದರೆ ಬಹುಶ: ನಾನು ಮೆಚ್ಚುತ್ತಿದ್ದೆ.ಆದರೆ ಅದನ್ನವರುಮಾಡಿಲ್ಲ. ಮಾನ್ಯ ಸಚಿವರು ಹೇಳುವಮಾತಿಗೂ ತೆರಿಗೆ ಹಾಕುವ ವಿಧಾನಕ್ಕೂ ಸ್ವಾಮ್ಯವಿಲ್ಲ. ವ್ಯತಿರಿಕ್ತವಾಗಿದೆ. ಟರ್ನ್ ಓವರ್ ಟ್ಯಾಕ್ಸ್ ಮೊದಲು ಇರಲಿಲ್ಲ, ಅವರು ಆದನ್ನು ಕಂಡುಹಿಡಿದು ಹೊಸ ವ್ಯಾಖ್ಯೆಯೊಂದನ್ನು ಆದಕ್ಕೆ ಕೊಟ್ಟಿದ್ದಾರೆ.

ಮಾರಾಟ ತೆರಿಗೆಯಂ ವ್ಯಾಪ್ತಿಯಲ್ಲಿ ಟರ್ನ್ ಓವರ್ ಟ್ಯಾಕ್ಸ್ ಮಾರಾಟ ತೆರಿಗೆಯಿಂದ ಪರಿವರ್ತನೆಯಾಗ ಬಲ್ಲದೆ? ಮಾರಾಟ ತೆರಿಗೆಯ ವ್ಯಾಪ್ತಿಯಲ್ಲಿ ಮತ್ತು ಅದರ ವ್ಯಾಖ್ಯೆಯಲ್ಲಿ ಇದನ್ನು ತರುವುದು ಸಾಧುವೆ ? ಯಾವ ನ್ಯಾಯಾಲಯದಲ್ಲೂ ಇದನ್ನು ತಪ್ಪು ಎಂದು ಹೇಳಿಲ್ಲ ಎಂದಾಕ್ಷಣ ಇದು ಸರಿಯೆಂದು ನಾವು ಭಾವಿ ಸಬಹುದೆ ? ಒಂದು ಸರ್ಕಾರ ಕಾನೂನಂ ಮಾಡಿದರೆ ಅಥವಾ ಒಂದು ಸಿದ್ಧಾಂತವನ್ನು ಅಳವಡಿಸಿಕೊಂಡರೆ ಅಥವಾ ಒಂದು ಕಾರ್ಯಕ್ರಮ ಹಾಕಿಕೊಂಡರೆ ಅದನ್ನು ವಿಮರ್ಶೆ ಮಾಡುವ ಸಂದರ್ಭದಲ್ಲಿ ಅದು ಪ್ರಶ್ನೆಗೆ ಒಳಗಾದಂತಿರಬೇಕು. ಸಾಧ್ಯವಾದಷ್ಟು ಮಟ್ಟಿಗೆ ನ್ಯಾಯಾಲಯಗಳಾಗಲೀ ಅಥವಾ ವಿಮರ್ಶೆ ಮಾಡುವ ಜನರಾಗಲೀ ಪ್ರಶ್ನೆ ಮಾಡುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಒಂದಂ ವ್ಯಾಖ್ಯೆಯನಾಗಲೀ ಅಥವಾ ಸಿದ್ಧಾಂತವನ್ನಾಗಲೀ ಅಥವಾ ಕಾನೂನನ್ನಾಗಲೀ ಮಾಡಬೇಕೇ ಹೊರತು, ಬೇರೆಯವರು ತಪ್ಪು ಕಂಡು ಹಿಡಿದಿಲ್ಲ ಎನ್ನುವ ಒಂದೇ ಒಂದು ಕಾರಣದಿಂದ ತನ್ನ ಮಾತೇ ಸರಿ ಎಂದು ಹೇಳುವುದು ಸಿಂಧುವಲ್ಲ. ನಮ್ಮ ರಾಜ್ಯದಲ್ಲಿ ಹಿಂದೆ ಅನೇಕ ವಿಷಯಗಳು ರಾಜ್ಯಾಂಗಕ್ಕೆ ವಿರುದ್ಧವಾಗಿದ್ದವು. ಅವು ಜಾರಿಯಲ್ಲಿ ಇದ್ದವು. ಆದರೆ, ಯಾವುದೋ ಒಂದು ಹಂತದಲ್ಲಿ ಶ್ರೇಷ್ಟ ನ್ಯಾಯಾಲಯದಲ್ಲೂ ಅಥವಾ ಉಚ್ಚ ನ್ಯಾಯಾಲಯದಲ್ಲಿ ಅವುಗಳ ಬಗ್ಗೆ ಪ್ರಶ್ನೆ ಮಾಡಿದಾಗ, ರಾಜ್ಯಾಂಗದಲ್ಲಿದ್ದ ಅನೇಕ ಲೋಪ ದೋಷಗಳನ್ನು ಅವರು ಎತ್ತಿ ಹಿಡಿದಾಗ ಅವುಗಳನ್ನು ತಿದ್ದುಕೊಂಡ ಪ್ರಸಂಗಗಳೂ ಇವೆ. ಅದುದರಿಂದ, ನ್ಯಾಯಾಲಯದವರು ಇದಂ ಸರಿಯಲ್ಲ ಎಂದಂ ಹೇಳಲಿಲ್ಲ ಎನ್ನುವ ಒಂದೇ ಒಂದಂ ಕಾರಣಕ್ಕಾಗಿ ನನ್ನ ಮಾತೇ ಸರಿ ಎಂದು ಹಣಕಾಸಿನ ಸಚಿವರು ಪ್ರತಿಪಾದನೆ ಮಾಡುವುದು ಸರಿಯಲ್ಲ ಅದುದರಿಂದ ಈ ತೆರಿಗೆಯಲ್ಲಿ ಕೆಲವು ತಾಂತ್ರಿಕ ವಿಷಯಗಳೂ ಅಡಕವಾಗಿರುವುದರಿಂದ ಮಾನ್ಯ ಮಂತ್ರಿಗಳು ಕೊಟ್ಟಿರುವ ವಿವರಣೆ ನಮಗೆ ಸಮಾಧಾನ ತರುತ್ತಿಲ್ಲ. ಅಷ್ಟೇ ಅಲ್ಲದೆ, ಮಾರಾಟ ತೆರಿಗೆಯ ವ್ಯಾಪ್ತಿಗೆ ಟರ್ನ್ ಓವರ್ ತೆರಿಗೆಯನ್ನು ಸೇರಿಸುವುದು ಸೈದ್ಧಾಂತಿಕವಾಗಿ ಸರಿಯಾದುದಲ್ಲ, ಸಾಲ್ಕೀವಾಲ ಮಂಂತಾಗಿ ಬಹಳಷ್ಟು ತಜ್ಞರು ಮಾರಾಟ ತೆರಿಗೆಯಲ್ಲಿ ಪರಿಣತಿಯನ್ನು ಪಡೆದವರಿದ್ದಾರೆ. ಅವರ ಜೊತೆಗೆ ಸಮಾಲೋಚನೆ ಮಾಡಿ, ಇದು ಸಿಂಧುವೇ ಅಥವಾ ಅಸಿಂಧುವೇ ಎಂದು ವಿಮರ್ಶಿಸಿ, ಆಮೇಲೆ ತೆರಿಗೆಯನ್ನು ಹಾಕುವ ಕೆಲಸವನ್ನು ಮಾನ್ಯ ಹಣಕಾಸಿನ ಸಚಿವರು ಮಾಡಬೇಕು. ಆದುದರಿಂದ ಈ ತೆರಿಗೆಯನ್ನು ತರುವುದರಲ್ಲಿ ಯಾವ ಲೋಪದೋಷಗಳಿಲ್ಲ ಎನ್ನುವುದನು ಖಚಿತಪಡಿಸಿಕೊಂಡ ಮೇಲೆ ಈ ಮಸೂದೆಯನ್ನು ತರುವುದಕ್ಕೆ ಮಾನ್ಯ ಹಣಕಾಸಿನ ಸಚಿವರು ಪ್ರಯತ್ನ ಮಾಡಬೇಕೇ ಹೊರತು, ಅಲ್ಲಿಯವರಿಗೆ ಇದನ್ನು ವಾಪಸ್ಸು ಪಡೆಯಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ,—ಮಾನ್ಯ ಅಧ್ಯಕ್ಷಣಿಯಂವರೇ, ಈ ಮಸೂದೆ ಮೇಲೆ ಇಷ್ಟೊಂದು ಚರ್ಚೆ ಮಾಡುವ ಅವಕಾಶ ಇರಲಿಲ್ಲ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಹಣಕಾಸಿನ ದೃಷ್ಟಿಯಿಂದ ಮತ್ತು ಕಾನೂನಿನ ದೃಷ್ಟಿಯಿಂದ ಹಾಗೂ ತಾಂತ್ರಿಕವಾಗಿ ಹೇಳುವುದಾದರೆ ಇದರಲ್ಲಿ ಯಾವ ಲೋಪದೋಷಗಳು ಕಂಡುಬಂದಿಲ್ಲ. ಇಲ್ಲಿಯವರೆಗೆ ಇದರ ಬಗ್ಗೆ ಯಾರೂ ಕೂಡ ಪ್ರಶ್ನೆ ಎತ್ತಿಲ್ಲ.

ಶ್ರೀ ಕೆ. ಎಂ. ನಾಗಣ್ಣ —ಟರ್ನ್‌ಓವರ್ ಟಾಕ್ಸ್ ಎಂದು ಹೇಳುವುದರಲ್ಲಿ ತಪ್ಪು ಏನಿದೆ ? ನೀವು ಟ್ಯಾಕ್ಸ್ ಹಾಕುತ್ತಾ ಇರುವುದು ವರ್ತಕರ ಮೇಲೆ, ಕಮಾಡಿಟಿ ಮೇಲೆ ಹಾಕುತ್ತಾ ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಪದ ಉಪಯೋಗಿಸಿದ ತಕ್ಷಣ ಅದು ಬೇರೆ ಅರ್ಥ ಆಗುವುದಿಲ್ಲ. ಟ್ಯಾಕ್ಸ್ ಹಾಕುವಾಗ ಪ್ರತ್ಯೇಕವಾಗಿ ವಸ್ತುಗಳ ಮೇಲೆ ಹಾಕಿ ಮಾರಾಟ ಮಾಡುತ್ತಾರೆ. ಅದರ ಮೇಲೆ ಅಡಿಷನಲ್ ಟ್ಯಾಕ್ಸ್ ಹಾಕುತ್ತಾರೆ. The intention is very clear. The Hon. Member cannot direct the Government, what terminology we should use. Actually there is no hide and seek in this. I must say that it is based on the turn over. By what name we have to call it is left to us. The additional sales tax is based on the turn over.

SRI K. M. NAGANNA.—Then why do you call it as Sales Tax ?

SRI M. Y. GHORPADE.—Why not ? ಹೆಸರಿನಲ್ಲಿ ಏನು ಇದೆ ? ಟ್ಯಾಕ್ಸ್ ಹಾಕುವ ವಿಧಾನ ಏನು ಇದೆ ಅದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ಹೆಸರಿನಿಂದಲೇ ಕರೆಯಂ ನೇಕಂ ಎಂದು ಒತ್ತಾಯ ಮಾಡುವುದಂ ಅಷ್ಟೊಂದು ಸಮಂಜಸವಲ್ಲ. ಎಂಟರ್‌ಟೈನಿಂಮೆಂಟ್ ಟ್ಯಾಕ್ಸ್ ಇದೆ,

ಸರ್‌ಚಾರ್ಜ್ ಇದೆ ಷೋ ಟಾಕ್ಸ್ ಇದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ ಇದನ್ನು ಕೂಡ ಎಂಟರ್‌ಟೆಯನ್– ಮೆಂಟ್ ಟ್ಯಾಕ್ಸ್ ಎಂದು ಕರೆಯುತ್ತೇವೆ. ಅಡಿಷನಲ್ ಟ್ಯಾಕ್ಸ್ ಎಂದು ಏತಕ್ಕೆ ಕರೆಯಬಾರದು ಅಂದರೆ ಏನು ಆರ್ಥ ?

SRI K. M. NAGANNA.—You call it only show tax.

ಶ್ರೀ ಎಂ. ವೈ. ಘೋರ್ಪಡೆ.—ಸರ್‌ಚಾರ್ಜು ಟ್ಯಾಕ್ಸ್, ಷೋ ಟ್ಯಾಕ್ಸ್, ಎಲ್ಲವೂ ಸೇರಿ ಎಂಟರ್‌ಟೆಯಿನ್‌ಮೆಂಟ್ ಟ್ಯಾಕ್ಸ್.

ಶ್ರೀ ಕೆ. ಎಂ. ನಾಗಣ್ಣ—ನಮಗೆ ಸ್ವಲ್ಪ ವಿಷಯ ಗೊತ್ತಿದೆ ಕನ್‌ಫ್ಯೂಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಇದರಲ್ಲಿ ಕನ್‌ಫ್ಯೂಸ್ ಮಾಡುವುದು ಏನೂ ಇಲ್ಲ ನಾಗಣ್ಣನವರೇ, ಇದು ಸ್ಪಷ್ಟವಾಗಿಯೇ ಇದೆ ಇದು ಅದಷ್ಟುಮಟ್ಟಿಗೆ ಬಳಕೆದಾರರ ಮೇಲೆ ಬೀಳಬಾರದು ಎಂದು ಮಾಡಿದ್ದೇವೆ. ಇದರ ಉದ್ದೇಶ ಏನು ಎಂಬುದನ್ನು ತಾವು ಸ್ವಲ್ಪ ತಿಳಿದುಕೊಳ್ಳಬೇಕು.

SRI KAGODU THIMMAPPA.—How are going to prevent it ? Let the Hon. Minister say in what way he can prevent from passing on the consumers, while levying it.

SRI M Y. GHORPADE.—Madam Speaker, I can only read out from the Karnataka Sales Tax which is as follows.–

> "Not with standing anything contained in sub-section (1) no dealer who is liable to pay the additional tax under section 6B shall collect any amount by way of such additional tax or... ....

ಒಂದೊಂದು ರೀತಿಯಾಗಿ ಪಾಸ್ ಆನ್ ಮಾಡಬಹುದು ಅಂದರೆ ವಾದವಾಗುತ್ತದೆ. ನಾನು ಕಾನೂನು ಪ್ರಕಾರ ಎಷ್ಟರಮಟ್ಟಿಗೆ ಸೇಫ್‌ಗಾರ್ಡ್ ಮಾಡಲಿಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಿದ್ದೇನೆ. ಟರ್ನ್ ಓವರ್ ಜಾಸ್ತಿಯಾಗಿದ್ದು ಟ್ಯಾಕ್ಸ್ ಕೊಡುವ ಶಕ್ತಿ ಇರುವುದರಿಂದ ಅವರು ಅದನ್ನು ನೇರವಾಗಿ ಬಳಕೆದಾರರ ಮೇಲೆ ಹಾಕುವುದಕ್ಕೆ ಹೋಗುತ್ತಾರೆ. ಇದನ್ನ ಪ್ರೊಗ್ರೇಸೀವ್ ಆಧಾರದ ಮೇಲೆ.....

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಇವರು ಟರ್ನ್ ಓವರ್ ಟ್ಯಾಕ್ಸಿಗೆ ನೇರವಾಗಿ ಸೇಲ್ಸ್ ಟ್ಯಾಕ್ಸ್ ರಿಕವರಿ ಮಾಡದೆ ಇರಬಹುದು. ಇದನ್ನು ಸೆಲ್ಲಿಂಗ್ ಪ್ರೈಜ್‌ನಲ್ಲಿ ಇನ್‌ಕ್ಲೂಡ್‌ಮಾಡಿದ್ದಾರೆ.....

SRI M. Y. GHORPADE.—Madam Speaker, the point is, he cannot include it as an additional tax. If the retailer passed it on, in that case I have no control over it. But he cannot recover this tax as such. ಇದು ಹೇಗೆ ಪ್ರೊಗ್ರೆಸೀವ್ ಅಂದರೆ ೧೦ ಲಕ್ಷ ರೂಪಾಯಿಗಳನ್ನು ಟರ್ನ್ ಓವರ್ ಮೇಲೆ ಹಾಕಿದ್ದಕ್ಕೆ ೬ ೭೫೮ ಜನ ವರ್ತಕರಿಂದ ೫ ಕೋಟಿ ರೂಪಾಯಿ ಬಂತು, ಒಂದು ಲಕ್ಷ ಇರತಕ್ಕ ವರ್ತಕರ ಮೇಲೆ ಮೇಲೆ ಹಾಕುವುದಿಲ್ಲ. ೫ರಿಂದ ೧೦ ಲಕ್ಷ ಟರ್ನ್ ಓವರ್ ಇರತಕ್ಕ ೫,೨೧೪ ಜನರ ಮೇಲೆ ಟ್ಯಾಕ್ಸ್ ಹಾಕಿ ೫೦ ಲಕ್ಷ ರೂಪಾಯಿ ಪಡೆಯುತ್ತಿದ್ದೇವೆ. ಆದುದರಿಂದ ಇದು ಒಳ್ಳೆಯ ಪ್ರೊಗ್ರೇಸೀವ್ ಆಗಿದೆ. ನಮ್ಮ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಎಲ್ಲೆಲ್ಲಿ ಟ್ಯಾಕ್ಸ್ ಹಾಕುವುದಕ್ಕೆ ನ್ಯಾಯವಾಗಿ ಸಾಧ್ಯವಿದೆಯೋ ಅಂಥ ಕಡೆ ಹಾಕಬೇಕಾಗುತ್ತದೆ. ೫೦ ಲಕ್ಷ ರೂಪಾಯಿಗಳನ್ನು ತಾತ್ಸಾರ ಮಾಡಲಿಕ್ಕೆ ಆಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ರಿಸೋರ್ಸ್ ಮೊಬೈಲೈಜೇಷನ್ ಎಫೆಕ್ಟ್ ನಾವು ಮಾಡಿದಷ್ಟು ಬೇರೆ ಯಾವ ರಾಜ್ಯ ದಲ್ಲಿಯೂ ಮಾಡಿಲ್ಲ. ಕೇಂದ್ರದಿಂದ ನಮಗೆ ಅಷ್ಟೊಂದು ಹಣ ಸಹಾಯ ಬರದೇ ಇದ್ದರೂ, ರಸ್ತೆಗಳ ಮತ್ತು ಬಾವಿಗಳ ಕೆಲಸವನ್ನು ಮಾಡಬೇಕಾದರೆ ಎಲ್ಲೋ ಒಂದು ಕಡೆ ಕಡಿಮೆ ಮಾಡಬೇಕಾಗುತ್ತದೆ. ಕಾಳಿನದಿಯಿಂತ ನೀರಾವರಿ ಯೋಜನೆಗಳ ಮೇಲೆ ಕಡಿಮೆ ಮಾಡಬೇಕಾಗುತ್ತದೆ. ಈ ಕಾರ್ಯಕ್ರಮ್ಯ ಗಳನ್ನು ಜಾಸ್ತಿ ಮಾಡಬೇಕಾದರೆ, ಕೇಂದ್ರದಿಂದ ಹೆಚ್ಚಿಗೆ ಸಹಾಯ ಬರಬೇಕಾಗುತ್ತದೆ.

ಕೇಂದ್ರದಿಂದ ಬರೀ ಉಪದೇಶ ಹೇಳುವುದು ಅವಶ್ಯಕತೆ ಇಲ್ಲ. ಈ ಬಾಬುಗಳ ಮೇಲೆ ಹೆಚ್ಚಿಗೆ ಖರ್ಚು ಮಾಡುವಾಗ, ನಮಗೆ ಹೆಚ್ಚಿನ ಸಾರ್ವಭೌಮ ಬರಬೇಕಾಗಿದೆ. ಇರಿಗೇಷನ್ ಪವರ್‌ಗೆ ಧಕ್ಕೆ ಬರದಂತೆ ಈ ಕಾರ್ಯಕ್ರಮಕ್ಕಾಗಿ ಕೊಡುವ ಸಹಾಯ ಮತ್ತು ಹೆಚ್ಚಾಸಿನ ನೆರವನ್ನು ಜಾಸ್ತಿಯಾಗಿ ಕೊಡಬೇಕು ಇಲ್ಲದೇ ಇದ್ದರೆ ಬರೀ ಭಾಷಣವಾಗುತ್ತದೆ. ವರ್ಷೇ ವರ್ಷೇ ನಾವು ಪ್ಲಾನಿಂಗ್ ಕಮಿಷನ್ ಕಡೆ ಹೋಗಿ ಸಹಾಯಪಡೆದರೂ ಆದನ್ನು ಬಾವಿಗಳ ಮೇಲೆ ಸಮಾಜ ಕಲ್ಯಾಣ ಚಟುವಟಿಕೆಗಳ ಮೇಲೆ ಬೆಳಸಬೇಕಾಗುತ್ತದೆ. ನಾವು ಕನಿಷ್ಟ ಇಷ್ಟಾದರೂ ಇರಿಗೇಷನ್ ಪವರ್‌ಗೆ ಖರ್ಚುಮಾಡದೇ ಹೋದರೆ ರಾಜ್ಯದ ಹಿತ ದೃಷ್ಟಿಯಿಂದ ಬಹಳ ತೊಂದರೆಯಾಗುತ್ತದೆ ಕೇಂದ್ರ ಸರ್ಕಾರದವರು ನೇರವಾಗಿ ಇದರ ಬಗ್ಗೆ ಭಾಷಣ ಮಾಡುವುದಕ್ಕೆ ಬದಲು ನೇರವಾಗಿ ನಾವು ಹಾಕಿದ ಕಾರ್ಯಕ್ರಮಕ್ಕೆ ಇಂತಿಷ್ಟು ಎಂದು ಹಣಕಾಸಿನ ಪುಷ್ಟಿ ಕೊಡುವುದಾದರೆ ರಾಜ್ಯದ ಎಲ್ಲಾ ಕಾರ್ಯಕ್ರಮಗಳು, ಕಾಮಗಾರಿಗಳು ಇನ್ನು ಹೆಚ್ಚಿನ ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ.

The Hon. Member said that I accused the Centre of not containing inflation. I am only pointing out what he said is not appropriate because all that I am doing here is to add a little to the tax income. We are trying to raise a little tax income for the development of the State. We are not printing notes nor borrowing money. So far as the Central budget is concerned, I was mentioning that the deficit of Rs. 70 crores has been arrived at after borrowing Rs. 500 crores from the borrowing system, If they had borrowed the same amount as last year, the deficit would not be Rs. 70 crores but Rs. 270 crores. On top of that Rs. 800 crores have been drawn from foreign exchange savings,

3-00 P.M.

ಶ್ರೀ ಎಂ. ಎಸ್. ಕೃಷ್ಣನ್.—ಇಪ್ಪೊತ್ತು ಕೇಂದ್ರದವರೇ ಸೇಲ್ಸ್ ಟಾಕ್ಸ್ ಕೂಡ ತೆಗೆದುಕೊಳ್ಳಿ ಬೇಕು ಎಂದು ಇದ್ದಾರೆ.

Sri M. Y. Ghorpade.—I have reacted in the strongest possible manner to that. I have said that sales tax is the mainsty of State finance and the Centre cannot merge it in excise without consulting the State or without their agreement. ರಾಜ್ಯದ ಬಗ್ಗೆ ನಮಗೆ ಎಷ್ಟು ಕಳಿಕಳಿ ಇದೆ ಅದು ತಮಗೂ ಇದೆ. ಅದರ ಬಗ್ಗೆ ಅಷ್ಟೊಂದು ಸುಲಭವಾಗಿ ಒಪ್ಪಲಿಕ್ಕೆ ಆಗುವುದಿಲ್ಲ. ಈ ಸೇಲ್ಸ್ ಟ್ಯಾಕ್ಸ್ ೧೯೭೧-೭೨ರಲ್ಲಿ ೫೦ ಕೋಟಿ ರೂಪಾಯಿ ಇದ್ದುದು, ಈಗ ೧೫೦ ಕೋಟಿ ರೂಪಾಯಿ ಆಗಿದೆ ಅಂದರೆ ೧೦೦ ಕೋಟಿ ರೂಪಾಯಿ ಜಾಸ್ತಿಯಾದಂತೆ ಆಯಿತು. ಕೇಂದ್ರದಿಂದ ನಮಗೆ ನಮ್ಮ ಎಕ್ಸೈಜ್ ಪೇರು ಏನು ಬರುತ್ತದೆ ಅದು ೨೦ ಕೋಟಿ ರೂಪಾಯಿ ಇದ್ದುದು, ಈಗ ೬೦ ಕೋಟಿ ರೂಪಾಯಿ ಆಗಿದೆ ಇದರಲ್ಲಿ ರಾಜ್ಯದ ಮೂಲಭೂತವಾದ ಹಕ್ಕು ಅಡಗಿದೆ. ಆದುದರಿಂದ ಅದನ್ನು ನಾವು ಅಷ್ಟೊಂದು ಸುಲಭವಾಗಿ ಕೈ ಬಿಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಎಂ ಎಸ್. ಕೃಷ್ಣನ್ —ಅದು ಏನಾಗುತ್ತದೆ ಎಂದು ನೋಡುವವರೆಗೂ ಏತಕ್ಕೆ ಇದನ್ನು ತಡೆಹಿಡಿಯಂಬಾರದು.

Sri M. Y. Ghorpade—These are matters which as the Finance Minister of Karnataka, it is my duty to express it on the floor of the House and also whenever occasion permits. I also feel fairly confident that the Central Government will not act in a hasty manner As a matter of fact, when I spoke on the budget yesterday, I appreciated the statement made by the Union Finance Minister in

this regard. It was a frank statement and he openly admitted this position that this is the ministry of state finance and that if any change is to be made only it has to be made in consultation with States. This position he has openly admitted therefore, let us not jump to conclusions In regard to textile, tobacco and sugar which were considered as of all-India nature, they had come arrangement whereby they would levy excise and pass on something to the States We are now examining whether by that arrangement the States have got what they would have got if those items had remained within the purview of the State's sales tax. As I have already said, this is not merely question of money but a question of basic structure of federal finance. Therefore, when this matter comes up, I am sure it will be discussed at length on the floor of the House and I am quite sure that all members of this House to whichever party they may belong will react to this problem in the best interests of Karnataka.

MADAM SPEAKER.—I shall now put the consideration motion to the vote of the House. The question is :

"That the Karanataka Sales Tax (Amendment) Bill, 1977 be taken into consideration."

The motion was adopted

CLAUSE 2

MADAM SPEAKER—The Bill will now be taken up clause by clause. As there are no amendments I shall put all the clause together. The question is ;

"That clause 2 do stand part of the Bill."

The motion was adopted

Clause 2 was added to the Bill.

CLAUSE 1 Etc

MADAM SPEAKER.—The question is ;

"That Clause 1, the Long Title, the Preamble and the enacting formula do stand part of the Bill."

The motion was adopted

Clause 1, the Long Title the Preamble and the enacting formula were added to the Bill.

Motion to Pass

SRI M. Y. GHORPADE.—Madam Speaker, I beg to move :

'That the Karnataka Sales Tax (Amendment) Bill, 1977 be passed.''

MADAM SPEAKER.—The question is ;

"That the Karnataka Sales Tax (Amendment) Bill, 1977 be passed."

Those who are in favour of the motion will say 'Aye'

HON. MEMBERS.—'Aye'

MADAM SPEAKER—Those who are against motion will say 'No'.

HON. MEMBERS.—'No'.

MADAM SPEAKER.—Ayes have it, Ayes have it.....

SRI KAGOD THIMMAPPA.—I press for division.

(The division bell rang for two minutes)

MADAM SPEAKER.—The question is :

"That the Karnataka Sales Tax (Amendment) Bill, 1977 be passed.

The motion was adopted and the Bill was passed.

KARNATAKA ENTERTAINMENT TAX (AMENDMENT) BILL, 1977.

Motion to consider

SRI M. Y. GHORPADE.—I move

"That the Karnataka Entertainments Tax (Amendment) Bill, 1977, be taken into consideration."

MADAM SPEAKER.—*Motion moved.*

"That the Karnataka Entertainment Tax (Amendment) Bill, 1977, be taken into consideration."

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷಿಣಿಯಂವರೆ, ಈ ಎಂಟರ್‌ಟೈನ್‌ಮೆಂಟ್ ಟಾಕ್ಸ್ ಏನಿದೆ ಇದರಲ್ಲಿ ಅಂಥ ದೊಡ್ಡ ಕಠಿಣವಾದ ಪ್ರಶ್ನೆ ಏನೂ ಅಲ್ಲ. ಇದು ಬಹಳ ಸಾಧಾರಣವಾಗಿರುವುದರಿಂದ ಇದರ ಬಗ್ಗೆ ಸಂಕ್ಷಿಪ್ತವಾಗಿ ಒಂದೆರಡು ಮಾತುಗಳಲ್ಲಿ ಹೇಳಿ ಮುಗಿಸುತ್ತೇನೆ. ಸರ್ಕಾರಕ್ಕೆ ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ನಿಂದ ಏನು ಆದಾಯ ಬರಬೇಕೋ ಅದು ಸರಿಯಾಗಿ ಬರದೆ ಮಧ್ಯ ಸೋರಿ ಹೋಗುತ್ತಿದೆ ಎಂದು ಅನೇಕ ಕಡೆಗಳಿಂದ ನಮಗೆ ದೂರುಗಳು ಬಂದಿವೆ. ಇದು ಬಹುಶಃ ತಮಗೂ ಗೊತ್ತಿರಬಹುದು. ಇದನ್ನು ಸರಿಪಡಿಸುವ ದೃಷ್ಟಿಯಿಂದ Composition methodನ್ನು ಜಾರಿಗೆ ತರುತ್ತಿದ್ದೇವೆ, ಇವತ್ತು ನಮ್ಮ ರಾಜ್ಯದಲ್ಲಿ ಒಟ್ಟು ೧೦೨೪ ಸಿನಿಮಾ ಥೀಯೇಟರುಗಳಿವೆ. ಅದರಲ್ಲಿ ೫೩೮ ಥೀಯೇಟರಂಗಳು ೧೦ ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಸ್ಥಳಗಳಲ್ಲಿವೆ. ಈ ೫೩೮